# JANUARY 26, 2025

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು

<><><>

ಆಕಾಶವಾಣಿಯ ಆತ್ಮೀಯ ಕೇಳುಗರಿಗೆಲ್ಲ,

76ನೇ ಗಣರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು.

<><><>

ಮುಖ್ಯಾಂಶಗಳು:

- ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ, ಭಾರತದ ಗಣರಾಜ್ಯ ಮೌಲ್ಯಗಳು – ರಾಷ್ಟ್ರಪತಿ ದ್ರೌಪದಿ ಮುರ್ಮು.
- 76ನೇ ಗಣರಾಜ್ಯೋತ್ಸವ; ನಾಡಿನೆಲ್ಲೆಡೆ ಸಂಭ್ರಮ, ಪದ್ಮ ಪುರಸ್ಕಾರ ಸೇರಿ, 942 ಅಧಿಕಾರಿಗಳಿಗೆ ಪುರಸ್ಕಾರ ಹಾಗೂ ಶೌರ್ಯ ಪದಕ ಪ್ರಕಟ.
- ರಾಜೀವ್ ಗಾಂಧಿ ಪಂಚಾಯತ್ ರಾಜ್ ಫೆಲೋಶಿಪ್; ದೇಶದಲ್ಲೇ ಮೊದಲ ಯಶಸ್ವಿ ಪ್ರಯೋಗ.
- "ಫಿಲಾಟೆಲಿ ಪಾಸ್ ಪೋರ್ಟ್"; 80 ಶಾಶ್ವತ ಚಿತ್ರಗಳ ಕನ್ನಡ, ಇಂಗ್ಲಿಷ್ ಮತ್ತು ಹಿಂದಿ ಆವೃತ್ತಿ ಬಿಡುಗಡೆ.

<><><>

ಈಗ ವಾರ್ತೆಗಳ ವಿವರ

<><><>

ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ, ಆಧುನಿಕ ಯುಗದಲ್ಲಿ ಪರಿಚಯಿಸಲ್ಪಟ್ಟ, ಕೇವಲ ಸೈದ್ಧಾಂತಿಕ ಪರಿಕಲ್ಪನೆಗಳಲ್ಲ; ಭಾರತದ ಗಣರಾಜ್ಯ ಮೌಲ್ಯಗಳು ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ. ಗಣರಾಜ್ಯೋತ್ಸವದ ಮುನ್ನಾ ದಿನ, ದೇಶದ ಜನತೆಯನ್ನುದ್ದೇಶಿಸಿ ಭಾಷಣ ಮಾಡಿದ ಅವರು, 76ನೇ ಗಣರಾಜ್ಯೋತ್ಸವದ ಶುಭಾಶಯ ಕೋರಿದರು. ಸಂವಿಧಾನ ಅನುಷ್ಠಾನಗೊಂಡು, 75 ವರ್ಷಗಳ ನಂತರ, ಭಾರತದ ಯುವ ಗಣರಾಜ್ಯ, ಸರ್ವತೋಮುಖ ಪ್ರಗತಿಗೆ ಸಾಕ್ಷಿಯಾಗಿದೆ. ಗಾಂಧೀಜಿಯವರ ಕನಸುಗಳನ್ನು ಸಾಕಾರಗೊಳಿಸುವ, ನಮ್ಮ ಬದ್ಧತೆಯನ್ನು, ಇಂದು ಪುನರುಚ್ಚರಿಸೋಣ ಎಂದು, ರಾಷ್ಟ್ರಪತಿ ಕರೆ ನೀಡಿದರು.

<><><>

76ನೇ ಗಣರಾಜ್ಯೋತ್ಸವ ಸಂಭ್ರಮವಿಂದು. ಬೆಂಗಳೂರಿನ ಮಾಣಿಕ್ ಾ ಕವಾಯತು ಮೈದಾನ ಸೇರಿದಂತೆ, ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ರಾಷ್ಟ್ರ ಧ್ವಜಾರೋಹಣಕ್ಕೆ ಸಕಲ ಸಿದ್ಧತೆ ಮಾಡಲಾಗಿದೆ. ಇಂದು ಬೆಳಗ್ಗೆ 9 ಗಂಟೆಗೆ, ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಧ್ವಜಾರೋಹಣ ನೆರವೇರಿಸಲಿದ್ದಾರೆ. ಬಳಿಕ ಶಾಲಾ-ಕಾಲೇಜು ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಅಹಿತಕರ ಘಟನೆ ನಡೆಯದಂತೆ, ಮುನ್ನೆಚ್ಚರಿಕಾ ಕ್ರಮವಾಗಿ, ಎಲ್ಲೆಡೆ ಬಿಗಿ ಬಂದೋಬಸ್ತ್ ಪೊಲೀಸರು ಕೈಗೊಂಡಿದ್ದಾರೆ.

<><><>

ಗಣರಾಜ್ಯೋತ್ಸವದ ಹಿನ್ನೆಲೆ, ಬೆಂಗಳೂರಿನಲ್ಲಿ ಇಂದು ಭಾನುವಾರ ಬೆಳಗ್ಗೆ 6 ಗಂಟೆಯಿಂದ ಮೆಟ್ರೋ ಸಂಚಾರ ಆರಂಭವಾಗಿದೆ.

<><><>

76ನೇ ಗಣರಾಜ್ಯೋತ್ಸವದ ಸುಸಂದರ್ಭದಲ್ಲಿ, ರಾಜ್ಯದ ಎ.ಸೂರ್ಯಪ್ರಕಾಶ ಹಾಗೂ ನಟ ಅನಂತನಾಗ್ ಅವರಿಗೆ ಪದ್ಮಭೂಷಣ, ಕೊಪ್ಪಳದ ಭೀಮವ್ವ ಶಿಳ್ಳೇಕ್ಯಾತರ, ಬಾಗಲಕೋಟೆಯ ವೆಂಕಪ್ಪ ಸುಗತೇಕರ, ಕಲಬುರಗಿ ವಿಜಯಲಕ್ಷ್ಮೀ ದೇಶಮಾನೆ, ಹಾಸನದ ಕೆ.ಎಚ್.ರಘು, ಬೆಂಗಳೂರಿನ ರಿಕಿ ಕೇಜ್ ಹಾಗೂ ಪ್ರಶಾಂತ್ ಪ್ರಕಾಶ್ ಅವರಿಗೆ ಪದ್ಮಶ್ರೀ ಪ್ರಶಸ್ತಿ ಪ್ರಕಟಿಸಲಾಗಿದೆ. ನಾಡಿನ ಕೀರ್ತಿ ಹೆಚ್ಚಿಸಿದ ಸಾಧಕರನ್ನು, ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿನಂದಿಸಿದ್ದಾರೆ. ಒಟ್ಟು 7 ಜನ ಸಾಧಕರಿಗೆ ಪದ್ಮವಿಭೂಷಣ, 19 ಗಣ್ಯರಿಗೆ ಪದ್ಮಭೂಷಣ ಹಾಗೂ ವಿವಿಧ ಕ್ಷೇತ್ರಗಳ ಸಾಧನೆಗಾಗಿ, 113 ಜನರಿಗೆ ಪದ್ಮಶ್ರೀ ಪ್ರಶಸ್ತಿ ಪ್ರಕಟಿಸಲಾಗಿದೆ.

<><><>

ಕೊಪ್ಪಳ ತಾಲೂಕು, ಮೊರನಾಳ ಗ್ರಾಮದ 96 ವರ್ಷ ವಯಸ್ಸಿನ, ತೊಗಲು ಬೊಂಬೆಯಾಟದ ಹಿರಿಯ ಕಲಾವಿದೆ, ಭೀಮವ್ವ ಶಿಳ್ಳೇಕ್ಯಾತರ ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಭೀಮವ್ವ ಶಿಳ್ಳೇಕ್ಯಾತರ ಧ್ವನಿ 38 ಸೆಕೆಂದುಗಳು

<><><>

ವಿವಿಧ ಇಲಾಖೆಗಳ ಒಟ್ಟು 942 ಅಧಿಕಾರಿಗಳಿಗೆ, ವಿಶಿಷ್ಟ ಸೇವಾ ಪುರಸ್ಕಾರ ಹಾಗೂ ಶೌರ್ಯ ಪದಕಗಳನ್ನು ಪ್ರಕಟಿಸಲಾಗಿದೆ.

<><><>

ರಾಜ್ಯದ ಇಬ್ಬರು ಅಧಿಕಾರಿಗಳಿಗೆ ರಾಷ್ಟ್ರಪತಿ ಪದಕ ಹಾಗೂ 19 ಜನ ಪೊಲೀಸ್ ಅಧಿಕಾರಿಗಳಿಗೆ ವಿಶಿಷ್ಟ ಸೇವಾ ಪುರಸ್ಕಾರ ಘೋಷಿಸಲಾಗಿದೆ.

<><><>

ಗದಗ ಜಿಲ್ಲೆ, ಲಕ್ಕುಂಡಿಯ ಐತಿಹಾಸಿಕ ಬ್ರಹ್ಮ ಜಿನಾಲಯದ ಸ್ತಬ್ಧ ಚಿತ್ರ ಇಂದು, ಹೊಸ ದಿಲ್ಲಿಯ ಕರ್ತವ್ಯ ಪಥದಲ್ಲಿ, 76ನೇ ಗಣರಾಜ್ಯೋತ್ಸವದ ವರ್ಣರಂಜಿತ ಕವಾಯತಿನಲ್ಲಿ, ಪ್ರದರ್ಶನಗೊಳ್ಳಲಿದೆ. ರಾಜ್ಯದ ಐತಿಹಾಸಿಕ ಹಿರಿಮೆಯನ್ನು ಈ

ಸ್ತಬ್ಧಚಿತ್ರ ಬಿಂಬಿಸಲಿದೆ. 'ಲಕ್ಕುಂಡಿ– ಶಿಲ್ಪ ಕಲೆಯ ತೊಟ್ಟಿಲು' ಧ್ಯೇಯದ ಸ್ತಬ್ಧ ಚಿತ್ರ ನಾಡಿನ ಕೀರ್ತಿ ಬೆಳಗಲಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಎಕ್ಸ್ ಮಾಧ್ಯಮದಲ್ಲಿ, ಪ್ರಕಟಿಸಿದ್ದಾರೆ. ಪ್ರಾಚೀನ ಜೈನ ನಗರಿ ಲಕ್ಕುಂಡಿಯ ಬ್ರಹ್ಮ ಜಿನಾಲಯದ ವಿಶೇ ‌ ತೆ ಬಗ್ಗೆ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಧಾರವಾಡದ ಜಿನದತ್ತ ಹಡಗಲಿ.

<><><>

ಜಿನದತ್ತ ಹಡಗಲಿ ಧ್ವನಿ 60 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

"ರಾಜೀವ್ ಗಾಂಧಿ ಪಂಚಾಯತ್ ರಾಜ್ ಫೆಲೋಶಿಪ್" ಕಾರ್ಯಕ್ರಮ ಜಾರಿಗೊಳಿಸುವ ಮೂಲಕ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಯಶಸ್ವಿ ಪ್ರಯೋಗ ದೇಶದಲ್ಲೇ ಮೊದಲ ಬಾರಿಗೆ ಕೈಗೊಂಡಿದೆ ಎಂದು, ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ. ಹಿಂದುಳಿದ ಕಲ್ಯಾಣ ಕರ್ನಾಟಕದಲ್ಲಿ, ಸ್ಥಳೀಯ ಆಡಳಿತವನ್ನು ಬಲಪಡಿಸುವ ಉದ್ದೇಶದಿಂದ, ಉತ್ಸಾಹಿ ಹಾಗೂ ಪ್ರತಿಭಾವಂತ ಯುವ ಸಮುದಾಯಕ್ಕೆ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಕಾರ್ಯ ನಿರ್ವಹಿಸಲು ಅವಕಾಶ ಮಾಡಿಕೊಡಲಾಗಿದೆ ಎಂದು ಎಕ್ಸ್ ಮಾಧ್ಯಮದಲ್ಲಿ ಅವರು ಪ್ರಕಟಿಸಿದ್ದಾರೆ. ತರಬೇತಿ ಪಡೆದ, 44 ಫೆಲೋಗಳ ಕಾರ್ಯದ ಪ್ರಗತಿ ವರದಿಯನ್ನು ತಾವು ಅವಲೋಕಿಸಿ, ಶ್ಲಾಘನೀಯ ಕಾರ್ಯಕ್ಕೆ ಅಭಿನಂದಿಸಿದ್ದಾಗಿ, ತಿಳಿಸಿದ್ದಾರೆ.

<><><>

ಕಲ್ಯಾಣ ಕರ್ನಾಟಕ ಭಾಗದ ಗ್ರಾಮಗಳಲ್ಲಿ 39 ಅರಿವು ಕೇಂದ್ರಗಳನ್ನು ಪುನಃ ಆರಂಭಿಸುವಲ್ಲಿ 44 ಜನ ಫೆಲೋಗಳು ಶ್ರಮ ವಹಿಸಿದ್ದಾರೆ. ನಿರ್ಲಕ್ಷ್ಯಕ್ಕೆ ಒಳಗಾಗಿ ಮುಚ್ಚಿ ಹೋಗಿದ್ದ, 116 ಕೂಸಿನ ಮನೆಗಳನ್ನು ಪುನಃ ಆರಂಭಿಸಿದ್ದಾರೆ. 86 ಕೂಸಿನ ಮನೆಗಳಲ್ಲಿ ಪೌಷ್ಟಿಕ ಆಹಾರ ಒದಗಿಸುವಲ್ಲಿ ಕ್ರಮ ವಹಿಸಿದ್ದಾರೆ. ಓದುವ ಸಂಸ್ಕೃತಿಯನ್ನು ಹೆಚ್ಚಿಸಲು, ಪುಸ್ತಕ ಗೂಡು ಎಂಬ ವಿನೂತನ ಮಾದರಿಯ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ ಎಂದು, ಸಚಿವ ಪ್ರಿಯಾಂಕ್ ಖರ್ಗೆ ಶ್ಲಾಘಿಸಿದ್ದಾರೆ.

<><><>

"ಫಿಲಾಟೆಲಿ ಪಾಸ್ ಪೋರ್ಟ್" ಅನ್ನು ಕನ್ನಡ, ಇಂಗ್ಲಿ ್ ಮತ್ತು ಹಿಂದಿ ಆವೃತ್ತಿಯಲ್ಲಿ ಬಿಡುಗಡೆ ಮಾಡಲಾಗಿದ್ದು, ಈ ಪುಸ್ತಕ 80 ಶಾಶ್ವತ ಚಿತ್ರಗಳ ರದ್ದತಿಗಳನ್ನು ಒಳಗೊಂಡಿದೆ ಎಂದು, ಅಂಚೆ ಇಲಾಖೆಯ ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ರಾಜೇಂದ್ರ ಕುಮಾರ್ ತಿಳಿಸಿದ್ದಾರೆ. ಬೆಂಗಳೂರಿನ ಅಂಚೆ ಕಚೇರಿಯಲ್ಲಿ, "ಫಿಲಾಟೆಲಿ ಪಾಸ್ ಪೋರ್ಟ್' ಬಿಡುಗಡೆ ಮಾಡಿ, ಮಾತನಾಡಿದರು. ರಾಷ್ಟ್ರೀಯ ಪ್ರವಾಸೋದ್ಯಮ ದಿನದ ಅಂಗವಾಗಿ, ಎಂ.ಲೋಕೇಶ್ವರ್ ರಾವ್ ರಚಿಸಿದ, "ರಾಮಾಯಣ ಆನ್ ಸ್ಟಾಂಪ್ಸ್ " ಪುಸ್ತಕ ಬಿಡುಗಡೆ ಮಾಡಲಾಯಿತು. ಎಂ.ಲೋಕೇಶ್ವರ್ ರಾವ್ ಮಾತನಾಡಿ, ಅಯೋಧ್ಯೆಯಿಂದ ಶ್ರೀಲಂಕಾ ವರೆಗೆ, ಶ್ರೀ ರಾಮ ಮತ್ತು ಸೀತೆ ನಡೆದಾಡಿದ ಎಲ್ಲ ಸ್ಥಳಗಳ ಮಾಹಿತಿ ಹಾಗೂ ಆ ಸ್ಥಳದ

ಅಂಚೆ ಚೀಟಿಗಳು ಸೇರಿ, 30ಕ್ಕೂ ಹೆಚ್ಚು ದೇಶಗಳ ಮಾಹಿತಿಯನ್ನು ಈ ಪುಸ್ತಕ ಒಳಗೊಂಡಿದೆ ಎಂದು ಅವರು ಮಾಹಿತಿ ನೀಡಿದರು.

<><><>

ಗದಗ ಜಿಲ್ಲೆ ಮುಂಡರಗಿ ತಾಲೂಕು, ಕಪ್ಪತ ಗುಡ್ಡದ, ಶ್ರೀ ನಂದಿವೇರಿ ಸಂಸ್ಥಾನ ಮಠ, ಇಂದಿನಿಂದ ಮೂರು ದಿನಗಳ, ನಂದಿಭೂಷಿತ ಕಪ್ಪತಜ್ಯೋತಿ ಯಾತ್ರೆ ಆಯೋಜಿಸಿದೆ. ಪರಂಪರಾಗತ ಪದ್ಧತಿಯಲ್ಲಿ ನಂದಿಗಳನ್ನು ಬಳಸಿ, ಕೃಷಿ ಕೈಗೊಳ್ಳಲು ಹಾಗೂ ಸಾವಯವ ಕೃಷಿ ಪದ್ಧತಿಯನ್ನು ಪ್ರೋತ್ಸಾಹಿಸಲು, ಬೆಳಗಾವಿ ಜಿಲ್ಲೆ ಕಿತ್ತೂರು ಚನ್ನಮ್ಮನ ಕೋಟೆ ಮುಂಭಾಗದಿಂದ, ಗದಗ ಜಿಲ್ಲೆಯ ಕಪ್ಪತಗುಡ್ಡದ ವರೆಗೆ ಈ ಯಾತ್ರೆ ನಡೆಯಲಿದೆ. ಪ್ರದೇಶ ಸಮಾಚಾರಕ್ಕಾಗಿ ಹೆಚ್ಚಿನ ಮಾಹಿತಿ ನೀಡಿದ್ದಾರೆ, ಕಪ್ಪತಗುಡ್ಡ ಶ್ರೀ ನಂದಿವೇರಿ ಸಂಸ್ಥಾನ ಮಠದ ಶ್ರೀ ಶಿವಕುಮಾರ ಸ್ವಾಮೀಜಿ.

<><><>

ಶ್ರೀ ಶಿವಕುಮಾರ ಸ್ವಾಮೀಜಿ ಧ್ವನಿ 60 ಸೆಕೆಂದುಗಳು

<><><>

ವೀರ ರಾಣಿ ಕಿತ್ತೂರು ಚನ್ನಮ್ಮನವರ, ಬಲಗೈ ಬಂಟ, ಸಂಗೊಳ್ಳಿ ರಾಯಣ್ಣನವರ ಪುಣ್ಯ ತಿಥಿ ಇಂದು. 1831 ರ ಜನವರಿ 26 ರಂದು, ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿ ಗಲ್ಲು ಶಿಕ್ಷೆ ವಿಧಿಸಿ, ಬೆಳಗಾವಿ ಜಿಲ್ಲೆ, ಖಾನಾಪುರ ತಾಲೂಕು ನಂದಗಡದಲ್ಲಿ ಗಲ್ಲಿಗೇರಿಸಿತು. ಇಂದು ವಿವಿಧೆಡೆ ಅವರ ಸ್ಮೃತಿಯಲ್ಲಿ ಗೌರವಾರ್ಪಣೆ ಆಯೋಜಿತವಾಗಿದೆ.

<><><>

ಸೌರವ್ಯೂಹದ ಅನೇಕ ಗ್ರಹಗಳು, ನಿನ್ನೆ ಮುಸ್ಸಂಜೆಯ ನಂತರ ಆಗಸದಲ್ಲಿ ಕಂಡುಬಂದ, ವಿರಳ ಖಗೋಳ ವಿದ್ಯಮಾನ ವೀಕ್ಷಿಸಲು, ಬೆಂಗಳೂರಿನ ಜವಹರಲಾಲ್ ನೆಹರೂ ತಾರಾಲಯದಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಶುಕ್ರ, ಮಂಗಳ ಹಾಗೂ ಗುರು, ಈ ಮೂರು ಗ್ರಹಗಳು ಬರಿಗಣ್ಣಿಗೆ ಕಾಣಿಸಿದರೆ, ನಾಲ್ಕು ದೊಡ್ಡ ಗ್ಯಾಲಲಯನ್ ಉಪಗ್ರಹಗಳು ಹಾಗೂ ನಕ್ಷತ್ರ ಪುಂಜಗಳು ದೂರದರ್ಶಕದ ಮೂಲಕ ಗೋಚರಿಸಿದವು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ದೇಶಾದ್ಯಂತ, 15ನೇ ರಾಷ್ಟ್ರೀಯ ಮತದಾರರ ದಿನವನ್ನು ಆಚರಿಸಲಾಯಿತು. ಹೊಸ ದಿಲ್ಲಿಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಚಾಲನೆ ನೀಡಿದರು.

<><><>

ಬೆಂಗಳೂರಿನ ಪುರ ಭವನದಲ್ಲಿ, 'ರಾಷ್ಟ್ರೀಯ ಮತದಾರರ ದಿನಾಚರಣೆ – 2025' ಆಚರಿಸಲಾಯಿತು. ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಚಾಲನೆ ನೀಡಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ, ಭಾರತದ ಗಣರಾಜ್ಯ ಮೌಲ್ಯಗಳು – ರಾಷ್ಟ್ರಪತಿ ದ್ರೌಪದಿ ಮುರ್ಮು.
- 76ನೇ ಗಣರಾಜ್ಯೋತ್ಸವ; ನಾಡಿನೆಲ್ಲೆಡೆ ಸಂಭ್ರಮ, ಪದ್ಮ ಪುರಸ್ಕಾರ ಸೇರಿ, 942 ಅಧಿಕಾರಿಗಳಿಗೆ ಪುರಸ್ಕಾರ ಹಾಗೂ ಶೌರ್ಯ ಪದಕ ಪ್ರಕಟ.
- ರಾಜೀವ್ ಗಾಂಧಿ ಪಂಚಾಯತ್ ರಾಜ್ ಫೆಲೋಶಿಪ್; ದೇಶದಲ್ಲೇ ಮೊದಲ ಯಶಸ್ವಿ ಪ್ರಯೋಗ.
- “ಫಿಲಾಟೆಲಿ ಪಾಸ್ ಪೋರ್ಟ್”; 80 ಶಾಶ್ವತ ಚಿತ್ರಗಳ ಕನ್ನಡ, ಇಂಗ್ಲಿಷ್ ಮತ್ತು ಹಿಂದಿ ಆವೃತ್ತಿ ಬಿಡುಗಡೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>